ಹೊದಿಕೆ, ದಿಂಬಿನ ಕವರು, ಬಟ್ಟೆಬರೆಯನ್ನೆಲ್ಲ ತೊಳೆಯಲಾಯಿತು. ಇವನೇ ತೊಳೆಯಬಲ್ಲ ಸರಕನೆಲ್ಲ ಹಿತ್ತಲಿಗೊಯ್ದು ನೆನೆಹಾಕಿದ. ಸಾಲದೆಂಬಂತೆ, ಆಫೀಸುಭರ್ತಿ ನೀರು ಹೊಯ್ದು ಶುದ್ಧಿಗೆ ತೊಡಗಿಬಿಟ್ಟ. ಭಾರೀ ಸಾಂಕ್ರಾಮಿಕದ ಮಾರಿ ಹೊಕ್ಕಿತೋ ಎಂಬಂತೆ ತಿಕ್ಕಿ ತಿಕ್ಕಿ ತೊಳೆದ. ಹೊರಗೆ ಆಕಾಶವು ಮಳೆಗರೆಯುತ್ತಿದ್ದರೆ, ಒಳಗೆಲ್ಲ ತಪಶ್ಶುದ್ಧಿಯ ವರ್ಷ! ಎಲ್ಲೆಲ್ಲೂ ಒದ್ದೆ. ಹೆಜ್ಜೆಯಿಟ್ಟಲ್ಲಿ ತೇವ. ನಡೆದಲ್ಲೆಲ್ಲ ಕೊಚ್ಚೆ. ಗಂಟೆ ಹತ್ತಾದರೂ ನೆಲವೊಣಗಲಿಲ್ಲ. ಇಷ್ಟೇ ಅಲ್ಲದೆ, ಮನೆಯಲ್ಲಿರುವ ಮೂರೂ ನಾಯಿಗಳು ಎಲ್ಲೆಂದರಲ್ಲಿ ಅಡ್ಡಾಡಿ, ಕಂಡಲ್ಲಿ ಉಚ್ಚೆ ಹೊಯ್ದು ರಂಪ ಮಾಡುವುದೆ?! ಕರ್ಮ ತಾನೇ? ಮೂಗು ಹಾಯ್ದಲ್ಲೆಲ್ಲ ಒದ್ದೆಯ ಬೂಸಲು, ಉಚ್ಚೆಯ ನಾತ! ವಾಂತಿ ಬರುವುದೊಂದು ಬಾಕಿ!!

ಅವೊತ್ತು ನಾನು, ತಪಸ್ಸನ್ನು ಸಿಕ್ಕಾಪಟ್ಟೆ ಬೈದಾಡಿಬಿಟ್ಟೆ. ಅಳತೊಡಗಿದ. 'ಗೊತ್ತಾಗಲಿಲ್ಲ, ಸಾಬ್‌ಜೀ... ಆಫೀಸು ಶುದ್ಧಿ ಮಾಡಬಾರದು ಅಂತ... ಸ್ಸಾರೀ ಸಾಬ್‌ಜೀ...' ಎಂದು ಬಿಕ್ಕಿದ. ಇನ್ನೇನು ತಾನೇ ಮಾಡುವುದು? ಸುಮ್ಮನಾದೆ. ಸುಮ್ಮನಾದೆನೆಲ್ಲಿ, ಹತ್ತು ಮತ್ತು ಹನ್ನೊಂದು ಗಂಟೆಗಿದ್ದ ಎರಡು ಮೀಟಿಂಗನ್ನು ಮುಂದೂಡಿ, ಕೆಲಸದವರಿಗೆಲ್ಲ ಗ್ರಹಣೋತ್ತರ ರಜೆ ಘೋಷಿಸಿ, ನೆಲವೊಣಗಿಸಲಿಕ್ಕೆ ಹೆಣಗುವುದಾಯಿತು. ಸರಿ... ಒಣಬಟ್ಟೆಯಿಂದ ನೆಲ ಒರೆಸೋಣವೆಂದರೆ, ಹಾಳಾದ್ದು, ಒಂದಾದರೂ ಒದಗಬೇಡವೆ?! ತಪಸ್ಸು ಗ್ರಹಣಶೌಚದ ನೆಪದಲ್ಲಿ ಇದ್ದಬದ್ದ ಒರೆಸುಬಟ್ಟೆಯನ್ನೆಲ್ಲ ನೆನೆಸಿ ಹರವಿಬಿಟ್ಟಿದ್ದ! ಮಳೆಗಾಲ ಬೇರೆ; ಒಣಗುವುದೆಂತು? ಸುರಿವುದೇ ಕೆಲಸವಾದ ಸುರಿಮಳೆಯಲ್ಲಿ ಒಣಗಿಸುವುದೆಂತು? ಆಫೀಸಿನಲ್ಲೆಲ್ಲೂ ಬಟ್ಟೆ ಹರವಿಕೊಂಡುಳಿವುದಾಯಿತು.

ಈ ಗಡಿಬಿಡಿಯ ನಡುವೆ ಮಧ್ಯಾಹ್ನ ಮೂರು ಗಂಟೆಗಿದ್ದ ಮೀಟಿಂಗೊಂದನ್ನು ಮುಂದೂಡಲು ಮರೆತೇಹೋಯಿತು. ಠೀಕು ಎರಡೂ ಮುಕ್ಕಾಲಿಗೆಲ್ಲ ನಿಗದಿತ ಕ್ಲಯಂಟು ಆಫೀಸು ಹೊಕ್ಕಾಗ, ನನಗೂ ಹೆಚ್ಚಾಗಿ ಅವನಿಗೇ ಆಘಾತವಾಯಿತು! 'ನಾನೇನು ನಿಮ್ಮ ಆಫೀಸು ಹೊಕ್ಕೆನಾ, ಇಲ್ಲಾ ಧೋಬೀಘಾಟನ್ನಾ?!' ಎಂದು ತಮಾಷೆ ಮಾಡಿದ. ಕ್ಲಯಂಟಿಗೆ ಇಡೀ ತಪಸ್ಪುರಾಣವನ್ನು ಅರುಹಿ, ನಗಿಸಿ, ನಾನೂ ನಡುನಕ್ಕು, 'ಹೇಗಿದ್ದರೂ ಇಷ್ಟು ದೂರ ಬಂದಿದ್ದೀರಿ... ಈ ರಂಪದ ನಡುವೆ ಅಡ್ಜಸ್ಟ್ ಮಾಡಿಕೋತೀರಿ ಅಂದರೆ, ಡಿಸ್ಕಸ್ ಮಾಡೋಣ...' ಎಂದು ವಿನಂತಿಸಿದೆ. ಒಪ್ಪಿದ. ಅವನನ್ನು ನನ್ನ ಮೇಜಿಗೊಯ್ದು ಕುಳ್ಳಿರಿಸಿ, ಕಂಪ್ಯೂಟರ್ ಆನುಗೈದರೆ ಚಾಲೂವೇನೋ ಆಯಿತು. ಆದರೆ ಕೀಬೋರ್ಡು ಆಡದುಳಿಯಿತು! ಯಾವ ಕೀಲಿಯೂ ನನ್ನಾವುದೇ ಪೆಟ್ಟಿಗೂ ಮಣಿಯಲಿಲ್ಲ. ನೂರೆಂಟು ಥರ ರಮಿಸಿಯೂ ಒಲಿಯದ ಹೆಂಡತಿಯಂತಾಡಿತು! ಕುಟ್ಟಿ ಕುಟ್ಟಿ ಬೆರಳು ಸೋತವು. ಮಟ್ಟಿ ಮಟ್ಟಿ ಮನಸ್ಸು ರೋಸಿತು! 'ಇದನ್ನೂ ನೀರು ಹಾಕಿ ತೊಳೆದಿದ್ದಾನಾಂತ ಕೇಳಿ, ಸಾಹೇಬರೇ...' ಕ್ಲಯಂಟು ತಮಾಷೆ ಮುಂದುವರೆಸಿದ.

ಈ ಪರಿ ಪರಿಹಾಸ್ಯವೇನೇ ಇದ್ದರೂ ಕ್ಲಯಂಟು ಕ್ಲಯಂಟೇ ತಾನೆ? ನನಗೋ ಕೈಕೈ ಹಿಸುಕುವುದಾಯಿತು. ನನ್ನ ಹುದ್ದೆಯ ಬುಡವೇ ಅಲುಗಿದಂತನ್ನಿತು. ಆರ್ಕಿಟೆಕ್ಟೆಂದರೆ ಜಗನ್ನಿರ್ಮಾತನೆಂದು ಬಗೆವ ನನ್ನೆಲ್ಲ ಹಮ್ಮೂ ಒಮ್ಮೆಗೇ ತೆಗೆದುಹೋದವು! ಕಡೆಗೇನೂ ಮಾಡತೋಚದೆ, ಕ್ಲಯಂಟಿಗೆ, ಪರಿಪರಿಯಾಗಿ ಸ್ಸಾರೀ ಹೇಳಿ ಸಾಗುಹಾಕಿದೆ. ಅವನು ಹೊರಟದ್ದೇ ಸೈ, ಆಫೀಸಿನ ಕಂಪ್ಯೂಟರು ಮೆಂಟೇನು ಮಾಡುವ ಶ್ರೀಕಂಠನಿಗೆ ಬರಹೇಳಿದೆ. ಒಂದು ಪ್ರಶಸ್ತ ದಿವಸವು ನೀರಿನಲ್ಲಿ ತೊಳೆದುಹೋಯಿತೆಂಬ ಬೇಜಾರು ಮತ್ತು